# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 702 |
| ಉತ್ತರಿಸಬೇಕಾದ ದಿನಾಂಕ | : | 22.02.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಪುಣ್ಯಕೋಟಿ ಯೋಜನೆ ಜಾರಿಗಾಗಿ ಇಲ್ಲಿಯವರೆಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು; ಸರ್ಕಾರೇತರ ಮೂಲಗಳಿಂದ ಕ್ರೋಡಿಕರಿಸಿರುವ ಅನುದಾನವೆಷ್ಟು; ಈ ಅನುದಾನವನ್ನು ಯಾವ ರೀತಿ ವ್ಯಯ ಮಾಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಇಲಾಖೆಯಲ್ಲಿ ಪುಣ್ಯ ಕೋಟಿ ದತ್ತು ಯೋಜನೆ ಜಾರಿಗಾಗಿ ಸರ್ಕಾರವು ಯಾವುದೇ ಅನುದಾನ ನೀಡಿರುವುದಿಲ್ಲ.<br>ಪುಣ್ಯ ಕೋಟಿ ದತ್ತು ಯೋಜನೆ web portal ನಲ್ಲಿ ನೋಂದಣಿಯಾಗಿರುವ ಗೋಶಾಲೆಗಳಲ್ಲಿನ ಜಾನುವಾರುಗಳನ್ನು ದತ್ತು ಪಡೆಯುವ ಮೂಲಕ ಆಹಾರ ನೀಡುವಿಕೆಗಾಗಿ ಹಾಗೂ ಮೇವು ನಿಧಿಗೆ ಇಲ್ಲಿಯವರೆಗೆ ಸಾರ್ವಜನಿಕರು ರೂ.30.97 ಲಕ್ಷ ದೇಣಿಗೆ ನೀಡಿರುತ್ತಾರೆ.<br>ಅಲ್ಲದೇ ರಾಜ್ಯ ಸರ್ಕಾರಿ ಅಧಿಕಾರಿಗಳು/ನೌಕರರು ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳು ಇಲ್ಲಿಯವರೆಗೆ ಒಟ್ಟು ರೂ.270.76 ಲಕ್ಷ ದೇಣಿಗೆ ಸಂಗ್ರಹವಾಗಿರುತ್ತದೆ.<br>ಸರ್ಕಾರದ ಆದೇಶ ಸಂಖ್ಯೆ:ಇ-ಪಸಂಮೀ/26/ಪಪಾಯೋ/2022 (ಭಾಗ-1) ದಿನಾಂಕ:07.02.2023ರಲ್ಲಿ ಪುಣ್ಯ ಕೋಟಿ ದತ್ತು ಯೋಜನೆ ಅಡಿಯಲ್ಲಿ ಸಂಗ್ರಹವಾಗಿರುವ ದೇಣಿಗೆ ಹಣವನ್ನು ಗೋಶಾಲೆಗಳಿಗೆ ಬಿಡುಗಡೆ ಮಾಡಲು ಅನುಸರಿಸಬೇಕಾದ ಮಾರ್ಗ ಸೂಚಿಯನ್ನು ಹೊರಡಿಸಿರುತ್ತದೆ. **ಅನುಬಂಧ-1ರಲ್ಲಿ ನೀಡಿದೆ.** |
| ಆ | ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಪುಣ್ಯಕೋಟಿ ಯೋಜನೆಯಡಿ ಗೋಶಾಲೆಗಳನ್ನು ಪ್ರಾರಂಭಿಸಲಾಗಿದೆ. ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಗೋಶಾಲೆಗಳನ್ನು ಪ್ರಾರಂಭಿಸಲು ಜಮೀನುಗಳನ್ನು ಗುರುತಿಸಲಾಗಿದೆಯೇ; ಈ ಗೋಶಾಲೆಗಳಲ್ಲಿ ಲಭ್ಯವಿರುವ ಸೌಲಭ್ಯಗಳೇನು; ಈ ಗೋಶಾಲೆಗಳಿಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು) | 2021-22ನೇ ಸಾಲಿನಲ್ಲಿ 30 ಸರ್ಕಾರಿ ಗೋಶಾಲೆಗಳ ನಿರ್ಮಾಣಕ್ಕೆ ಪ್ರತಿ ಗೋಶಾಲೆಗೆ ರೂ.50.00 ಲಕ್ಷದಂತೆ ಒಟ್ಟು ರೂ.1500.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ.<br>2022-23ನೇ ಸಾಲಿನಲ್ಲಿ 30 ಗೋಶಾಲೆಗಳ ಮುಂದುವರೆದ ಕಾಮಗಾರಿ ಹಾಗೂ ನಿರ್ವಹಣೆಗೆ ರೂ.50.00 ಲಕ್ಷದಂತೆ ರೂ.1500.00 ಲಕ್ಷಗಳು ಅನುದಾನ ಬಿಡುಗಡೆಗೊಳಿಸಲಾಗಿದೆ.<br>ವಿವರ **ಅನುಬಂಧ-2ರಲ್ಲಿ ನೀಡಿದೆ.**<br>2022-23ನೇ ಸಾಲಿನಲ್ಲಿ ಹೊಸ 70 ಸರ್ಕಾರಿ ಗೋಶಾಲೆಗಳನ್ನು ನಿರ್ಮಿಸಲು ಸ್ಥಳ ಗುರುತಿಸಿರುವ 37 ಗೋಶಾಲೆಗೆ ಪ್ರತಿ ರೂ.50.00 ಲಕ್ಷದಂತೆ ಒಟ್ಟು ರೂ.1850.00 ಲಕ್ಷಗಳ ಅನುದಾನ ಬಿಡುಗಡೆಗೊಳಿಸಲಾಗಿದೆ. ವಿವರ **ಅನುಬಂಧ-3ರಲ್ಲಿ ನೀಡಿದೆ.** |
| ಇ | ಪ್ರತಿ ಜಿಲ್ಲೆಯಲ್ಲಿ ಗೋಶಾಲೆಗಳನ್ನು ನಿರ್ಮಾಣ ಮಾಡಲು ಮತ್ತು ಇಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಹಾಗೂ ದಿನನಿತ್ಯದ ಕಾರ್ಯ ಚಟುವಟಿಕೆಗಳಿಗೆ ಅಗತ್ಯವಿರುವ ಅನುದಾನವೆಷ್ಟು; ಈ ಸಂಬಂಧ ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು? (ಜಿಲ್ಲಾವಾರು ವಿವರ ನೀಡುವುದು) | ಸರ್ಕಾರಿ ಗೋಶಾಲೆಗಳಲ್ಲಿ ಕೆಳಕಂಡ ವಿವರದಂತೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.<br>1) ಜಾನುವಾರುಗಳಿಗೆ ಶೆಡ್ 2) ನೀರಿನ ವ್ಯವಸ್ಥೆ 3) ವಿದ್ಯುತ್ ವ್ಯವಸ್ಥೆ 4) ಆಹಾರ ಸಂಗ್ರಹಣಾ ಕೊಠಡಿ 5) ಬೋರ್‌ವೆಲ್ 6) ಅಧಿಕಾರಿಗಳ ಸಿಬ್ಬಂದಿಗಳ ಕಛೇರಿ ಕೊಠಡಿ. |

ಇ-ಪಸಂಮೀ 52 ಸಲೆವಿ 2023

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು

ಅನುಬಂಧ - 1

AHF/ 26 /AHP/2022 (Part-1)-AHF_SEC_b_AH_Animal Husbandry Fisheries sec

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಪುಣ್ಯಕೋಟಿ ದತ್ತು ಯೋಜನೆಯಡಿಯಲ್ಲಿ ಸಂಗ್ರಹವಾಗುವ ಮೊತ್ತವನ್ನು ಪೋರ್ಟಲ್ ನಲ್ಲಿ ನೋಂದಣಿಗೊಂಡ ಗೋಶಾಲೆಗಳಿಗೆ ಬಿಡುಗಡೆ ಮಾಡಲು ಅನುಸರಿಸಬೇಕಾದ ಮಾರ್ಗಸೂಚಿಗಳಿಗೆ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:-
1. ಸರ್ಕಾರದ ಆದೇಶ ಸಂಖ್ಯೆ:ಆಇ/42/ಎಸ್ ಆರ್ ಪಿ/2022, ದಿನಾಂಕ:16.11.2022.
2. ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 26 ಪಪಾಯೋ 2022, ದಿನಾಂಕ:25.11.2022.
3. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರ ಏಕ ಕಡತ ಸಂಖ್ಯೆ: CAHVS-VTA0VIG/26/2022-VIGITECHAUD-COMM AHVS-Part (1) (ಇ- 870257).

******

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆರ್ಥಿಕ ಇಲಾಖೆಯಿಂದ ಹೊರಡಿಸಲಾದ ಆದೇಶದಲ್ಲಿ ಪುಣ್ಯಕೋಟಿ ದತ್ತು ಯೋಜನೆಯ ಸುಗಮ ಅನುಷ್ಠಾನಕ್ಕಾಗಿ ವಿವಿಧ ವೃಂದದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರು ಹಾಗೂ ನಿಗಮ/ಮಂಡಳಿ/ಪ್ರಾಧಿಕಾರ/ವಿಶ್ವವಿದ್ಯಾಲಯ/ಸ್ವಾಯತ್ತ ಸಂಸ್ಥೆಗಳ ನೌಕರರ ನವೆಂಬರ್-2022ರ ಮಾಹೆಯ ವೇತನದಿಂದ ಒಂದು ಬಾರಿಗೆ ಸೀಮಿತವಾಗಿ 1) "ಎ" ವೃಂದದ ಅಧಿಕಾರಿಗಳು ರೂ.11,000/- 2) "ಬಿ" ವೃಂದದ ಅಧಿಕಾರಿಗಳು ರೂ.4,000/- 3) "ಸಿ" ವೃಂದದ ನೌಕರರು ರೂ.400/- 4) "ಡಿ" ವೃಂದದ ನೌಕರರಿಗೆ ವಿನಾಯಿತಿ ನೀಡಿ ನಿರ್ಧಿಷ್ಟಪಡಿಸಿದ ಮೊತ್ತದ ವಂತಿಗೆಯನ್ನು ಕಟಾಯಿಸಲು ಹಾಗೂ ನಿಗದಿತ ಯೋಜನೆಗೆ ಬಳಕೆ ಮಾಡಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶದಲ್ಲಿ, ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿಯು ಆದಾಯ ತೆರಿಗೆ ಇಲಾಖೆಯಿಂದ ಪಡೆದಿರುವ Form Number :10AC ರ ಪ್ರಕಾರ "ಪುಣ್ಯಕೋಟಿ ದತ್ತು ಯೋಜನೆಗೆ" ದೇಣಿಗೆ ನೀಡುವವರು ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 80ಜಿ ರನ್ವಯ ತೆರಿಗೆ ವಿನಾಯಿತಿ ಪಡೆಯಲು ಅವಕಾಶವಿರುತ್ತದೆ ಎಂದು ಸೂಚಿಸಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಡತದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರು ಪುಣ್ಯಕೋಟಿ ದತ್ತು ಯೋಜನೆಯಡಿಯಲ್ಲಿ ಸಂಗ್ರಹವಾಗುವ ಹಣವನ್ನು ಪೋರ್ಟಲ್‌ನಲ್ಲಿ ನೋಂದಣಿಗೊಂಡ ಗೋಶಾಲೆಗಳಿಗೆ ಬಿಡುಗಡೆ ಮಾಡುವ ಕುರಿತು ಮಾರ್ಗಸೂಚಿಗಳಿಗೆ ಅನುಮೋದನೆ ನೀಡಿ ಸರ್ಕಾರದ ಆದೇಶ ಹೊರಡಿಸುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇ-ಪಸಂಮೀ 26 ಪಪಾಯೋ 2022 (ಭಾಗ-1),**
**ಬೆಂಗಳೂರು, ದಿನಾಂಕ:07.02.2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪುಣ್ಯಕೋಟಿ ದತ್ತು ಯೋಜನೆಯಡಿಯಲ್ಲಿ ಸಂಗ್ರಹವಾಗುವ ಮೊತ್ತವನ್ನು ಪೋರ್ಟಲ್‌ನಲ್ಲಿ ನೋಂದಣಿಗೊಂಡ ಗೋಶಾಲೆಗಳಿಗೆ ಬಿಡುಗಡೆ ಮಾಡುವ ಸಂಬಂಧ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವ ಮಾರ್ಗಸೂಚಿಗಳಿಗೆ ಅನುಮೋದನೆ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Kavya H.N.
(ಕಾವ್ಯ ಹೆಚ್.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)
07/02

**ಗೆ:**

1. ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಬೆಂಗಳೂರು.

...2

2. ಮಾನ್ಯ ಮುಖ್ಯ ಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ವಿಧಾನ ಸೌಧ ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ.
5. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
7. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
8. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ (ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರ ಮುಖಾಂತರ)
9. ಉಪ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು.
10. ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿ, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಪಶುಭವನ, ಬೆಂಗಳೂರು.
11. ಖಜಾನೆ ಆಯುಕ್ತರು, ಕೆ.ಪಿ.ಸಿ.ಎಲ್. ಕಟ್ಟಡ, 6ನೇ ಮಹಡಿ, ಅರಮನೆ ರಸ್ತೆ, ಬೆಂಗಳೂರು-560001.
12. ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
13. ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿ, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಪಶುಭವನ, ಬೆಂಗಳೂರು.

ಪ್ರತಿಗಳು:-

1. ಮಾನ್ಯ ಪಶುಸಂಗೋಪನೆ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
3. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
4. ಕಂಟ್ರೋಲ್ ರೂಂ ಕಂ-24/7 ಹೆಲ್ಪ್ ಲೈನ್ (ಸಹಾಯವಾಣಿ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪತ್ರ

**ಸರ್ಕಾರದ ಆದೇಶ ಸಂಖ್ಯೆ: ಇ–ಪಸಂಮೀ 26 ಪಪಾಯೋ 2022 (ಭಾಗ–1), ದಿನಾಂಕ:07.02.2023ರ ಆದೇಶದಲ್ಲಿ ಉಲ್ಲೇಖಿಸಿರುವ**

**ಪುಣ್ಯಕೋಟಿ ದತ್ತು ಯೋಜನೆಯಡಿಯಲ್ಲಿ ಸಂಗ್ರಹವಾಗುವ ಮೊತ್ತವನ್ನು ಪೋರ್ಟಲ್‌ನಲ್ಲಿ ನೋಂದಣಿಗೊಂಡ ಗೋಶಾಲೆಗಳಿಗೆ ಬಿಡುಗಡೆ ಮಾಡಲು ಅನುಸರಿಸಬೇಕಾದ ಮಾರ್ಗಸೂಚಿಗಳು ಕೆಳಕಂಡಂತಿವೆ.**

1. ಸರ್ಕಾರಿ ಅಧಿಕಾರಿ/ ನೌಕರರಿಂದ ನಿಗಮ/ ಮಂಡಳಿ/ ಪ್ರಾಧಿಕಾರದಿಂದ ಸಂದಾಯವಾದ ದೇಣಿಗೆ ಹಣವನ್ನು ಖಜಾನೆಯಿಂದ ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿಯು ಪುಣ್ಯಕೋಟಿ ದತ್ತು ಯೋಜನೆಗಾಗಿ ತೆರೆದ ಬ್ಯಾಂಕ್ ಖಾತೆಗೆ ಜಮಾ ಮಾಡಿಕೊಳ್ಳುವುದು.

2. ಪುಣ್ಯಕೋಟಿ ದತ್ತು ಯೋಜನೆಯಡಿ ಪೋರ್ಟಲ್‌ನಲ್ಲಿ ಚಾಲ್ತಿಯಲ್ಲಿರುವ ದತ್ತು ಪಡೆದ ಜಾನುವಾರುಗಳನ್ನು ಹೊರತುಪಡಿಸಿ, ಉಳಿದ ಜಾನುವಾರುಗಳ ಸಂಖ್ಯೆಗನುಗುಣವಾಗಿ ಹಾಗೂ ಅನುದಾನದ ಲಭ್ಯತೆಗೆ ಅನುಗುಣವಾಗಿ ವೆಬ್‌ಪೋರ್ಟಲ್ ಮುಖಾಂತರ ಸಂಬಂಧಪಟ್ಟ ಗೋಶಾಲೆ ಖಾತೆಗೆ ಹಣ ವರ್ಗಾಯಿಸುವುದು.

3. ವ್ಯಾಪ್ತಿ ಪ್ರದೇಶದ ಪಶುವೈದ್ಯರು ಆಯಾ ಗೋಶಾಲೆಗಳಿಗೆ ಬೇಟಿ ನೀಡಿ ಪುಣ್ಯಕೋಟಿ ತಂತ್ರಾಂಶದಲ್ಲಿ ನೋಂದಣಿಯಾಗಿರುವ ಜಾನುವಾರುಗಳ ಮಾಹಿತಿ ಹಾಗೂ ಸಂಖ್ಯೆಯನ್ನು ಪ್ರತಿ ಬಾರಿ ದೃಢೀಕರಿಸಿಕೊಂಡು ಸಂಬಂಧಪಟ್ಟ ಉಪ ನಿರ್ದೇಶಕರು ಮೇಲುರುಜು ಮಾಡಿ ಆಯುಕ್ತಾಲಯಕ್ಕೆ ಸಲ್ಲಿಸಿದ ನಂತರವೇ ಹಣ ವರ್ಗಾಯಿಸತಕ್ಕದ್ದು.

4. ಪ್ರತಿ 3 ತಿಂಗಳಿಗೆ ಒಮ್ಮೆ ಹಣವನ್ನು ಪುಣ್ಯಕೋಟಿ ದತ್ತು ಯೋಜನೆ ಮೂಲಕ ಜಾನುವಾರು ದತ್ತು ಪಡೆಯಲು ವೆಬ್‌ಪೋರ್ಟಲ್‌ನಲ್ಲಿ ಜಮಾ ಮಾಡುವುದು.

5. ಎರಡನೇ ಅಥವಾ ಮುಂದುವರೆದ ಕಂತುಗಳ ಬಿಡುಗಡೆಗೆ ಮುನ್ನ ಗೋಶಾಲೆಗಳವರು ಜಾನುವಾರುಗಳ ಆಹಾರಕ್ಕಾಗಿ ಮಾತ್ರ ಉಪಯೋಗಿಸಿರುವ ಬಗ್ಗೆ ಪ್ರಮಾಣ ಪತ್ರ ಹಾಗೂ ಪಡೆದಿರುವ ಮೊತ್ತಕ್ಕೆ ಪ್ರತಿ 3 ತಿಂಗಳಿಗೊಮ್ಮೆ ಹಣ ಸದ್ಬಳಕೆ ಪ್ರಮಾಣ ಪತ್ರವನ್ನು ಜಿಲ್ಲಾ ಉಪ ನಿರ್ದೇಶಕರ ಮುಖಾಂತರ ಆಯುಕ್ತಾಲಯಕ್ಕೆ ಸಲ್ಲಿಸುವುದು.

6. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ SPCA ಸಮಿತಿಯನ್ನು 3 ತಿಂಗಳಿಗೊಮ್ಮೆ ಸಭೆ ಕರೆದು ಪುಣ್ಯಕೋಟಿ ಪೋರ್ಟಲ್ ಮುಖಾಂತರ ಸಂದಾಯಗೊಂಡ ಅನುದಾನದ ಮಾಹಿತಿ ಹಾಗೂ ಅನುದಾನ ಸದ್ಬಳಕೆ ಕುರಿತು ಚರ್ಚಿಸುವುದು ಮತ್ತು ಆಯುಕ್ತಾಲಯಕ್ಕೆ ಮಾಹಿತಿ ಸಲ್ಲಿಸುವುದು.

7. ಪೋಲಿಸ್ / ಮಾನ್ಯ ನ್ಯಾಯಾಲಯದಿಂದ ಜಪ್ತಿ ಮಾಡಿಕೊಂಡ ಜಾನುವಾರುಗಳನ್ನು ಗೋಶಾಲೆಗೆ ಸ್ವೀಕರಿಸಿದ 15 ದಿನಗಳ ನಂತರ ಪುಣ್ಯಕೋಟಿ ಪೋರ್ಟಲ್ ನಲ್ಲಿ ದಾಖಲಿಸುವುದು. ಈ ಜಾನುವಾರುಗಳನ್ನು ದತ್ತು ಪಡೆದಲ್ಲಿ, ದತ್ತು ಅವಧಿ ಮುಗಿಯುವ ಮುಂಚೆ, ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಜಾನುವಾರುಗಳನ್ನು ಬಿಡುಗಡೆ ಮಾಡಿದ್ದಲ್ಲಿ ಅಥವಾ ಜಾನುವಾರುಗಳು ಮರಣ ಹೊಂದಿದ್ದಲ್ಲಿ, ಆ ಜಾನುವಾರುಗಳ ಉಳಿದ ಅವಧಿಯ ದತ್ತು ಹಣವನ್ನು ಗೋಶಾಲೆಯಲ್ಲಿನ ಇತರೆ ಜಾನುವಾರುಗಳಿಗೆ ದತ್ತು ಪಡೆಯಲು ಅವಕಾಶ ಕಲ್ಪಿಸುವುದು. ಒಂದು ವೇಳೆ ಆ ಗೋಶಾಲೆಯಲ್ಲಿ ದತ್ತು ಹಣವನ್ನು ಇತರೆ ಯಾವುದೇ ಜಾನುವಾರಿಗೆ ವರ್ಗಾಯಿಸಲು ದತ್ತು ಸ್ವೀಕರಿಸದಿರುವ ಜಾನುವಾರು ಲಭ್ಯವಿಲ್ಲದಿದ್ದಲ್ಲಿ, (ಆ ಗೋಶಾಲೆಯಲ್ಲಿ 100% ಎಲ್ಲಾ ಜಾನುವಾರುಗಳನ್ನು ದತ್ತು ಪಡೆದಲ್ಲಿ) ವ್ಯಾಪ್ತಿ ಪ್ರದೇಶದ ಪಶುವೈದ್ಯಾಧಿಕಾರಿಯು ಆ ಜಾನುವಾರುಗಳ ಉಳಿದ ಅವಧಿಯ ದತ್ತು ಹಣವನ್ನು ಸಂಬಂಧಪಟ್ಟ ಗೋಶಾಲೆಯಿಂದ ಹಿಂಪಡೆದು, ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿಯ ಪುಣ್ಯಕೋಟಿ ದತ್ತು ಯೋಜನೆಯ ಉಳಿತಾಯ ಖಾತೆಗೆ (Kotak Mahindra Bank) ಜಮಾ ಮಾಡುವುದು.

8. ಸ್ಥಳೀಯ ಸಂಸ್ಥೆಗಳು ಬಿಡಾಡಿ (ಮಾಲೀಕರಿಲ್ಲದ ಜಾನುವಾರು) ದನಗಳನ್ನು ಗೋಶಾಲೆಗೆ ಹಸ್ತಾಂತರಿಸಿದರೆ ಅವುಗಳನ್ನು ಸಹಾ ಕೂಡಲೇ ಪುಣ್ಯಕೋಟಿ ಪೋರ್ಟಲ್‌ನಲ್ಲಿ ದಾಖಲಿಸುವುದು ಹಾಗೂ ಮಾಲೀಕರು ಇರುವಂತಹ ಜಾನುವಾರುಗಳನ್ನು ಸ್ಥಳೀಯ ಸಂಸ್ಥೆಗಳು ವಶಪಡಿಸಿಕೊಂಡು ಗೋಶಾಲೆಗೆ ತಾತ್ಕಾಲಿಕವಾಗಿ ಹಸ್ತಾಂತರಿಸಿದರೆ ಅಂತಹ ಜಾನುವಾರುಗಳ ಮಾಹಿತಿಯನ್ನು 15 ದಿನಗಳ ನಂತರ ಪುಣ್ಯಕೋಟಿ ಪೋರ್ಟಲ್ ನಲ್ಲಿ ದಾಖಲಿಸುವುದು. ಈ ಜಾನುವಾರುಗಳನ್ನು ದತ್ತು ಪಡೆದಲ್ಲಿ, ದತ್ತು ಅವಧಿ ಮುಗಿಯುವ ಮುಂಚೆ, ಜಾನುವಾರು ಮಾಲೀಕರು ಜಾನುವಾರುಗಳನ್ನು ಬಿಡಿಸಿಕೊಂಡು ಹೋದಲ್ಲಿ ಅಥವಾ ಜಾನುವಾರುಗಳು ಮರಣ ಹೊಂದಿದ್ದಲ್ಲಿ, ಜಾನುವಾರುಗಳ ಉಳಿದ ಅವಧಿಯ ದತ್ತು ಹಣವನ್ನು ಗೋಶಾಲೆಯಲ್ಲಿನ ಇತರೆ ಜಾನುವಾರುಗಳಿಗೆ ದತ್ತು ಪಡೆಯಲು ಅವಕಾಶ ಕಲ್ಪಿಸುವುದು. ಒಂದು ವೇಳೆ ಆ ಗೋಶಾಲೆಯಲ್ಲಿ ದತ್ತು ಹಣವನ್ನು ಇತರೆ ಯಾವುದೇ ಜಾನುವಾರಿಗೆ ವರ್ಗಾಯಿಸಲು ದತ್ತು ಸ್ವೀಕರಿಸದಿರುವ ಜಾನುವಾರು ಲಭ್ಯವಿಲ್ಲದಿದ್ದಲ್ಲಿ, (ಆ ಗೋಶಾಲೆಯಲ್ಲಿ 100% ಎಲ್ಲಾ ಜಾನುವಾರುಗಳನ್ನು ದತ್ತು ಪಡೆದಲ್ಲಿ) ವ್ಯಾಪ್ತಿ ಪ್ರದೇಶದ ಪಶುವೈದ್ಯಾಧಿಕಾರಿಯು ಆ ಜಾನುವಾರುಗಳ ಉಳಿದ ಅವಧಿಯ ದತ್ತು ಹಣವನ್ನು ಸಂಬಂಧಪಟ್ಟ ಗೋಶಾಲೆಯಿಂದ ಹಿಂಪಡೆದು, ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿಯ ಪುಣ್ಯಕೋಟಿ ದತ್ತು ಯೋಜನೆಯ ಉಳಿತಾಯ ಖಾತೆಗೆ (Kotak Mahindra Bank) ಜಮಾ ಮಾಡುವುದು.

9. ವೆಬ್ ಪೋರ್ಟಲ್ ಅಭಿವೃದ್ಧಿಪಡಿಸಿದ ಕಿಯೋನಿಕ್ಸ್ ಸಂಸ್ಥೆರವರು ಪ್ರತಿ ಗೋಶಾಲೆಗೆ ವರ್ಗಾವಣೆಯಾದ ಹಣದ ಮಾಹಿತಿಯನ್ನು Excel Sheet ನಲ್ಲಿ ಗೋಶಾಲೆಯ ವಿವರ, ಜಾನುವಾರುಗಳ ಸಂಖ್ಯೆಯೊಂದಿಗೆ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಗೆ ನೀಡುವುದು.

Kavya H.N
(ಕಾವ್ಯ ಹೆಚ್.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)

# ಅನುಬಂಧ-2

**2022-23 ನೇ ಸಾಲಿನಲ್ಲಿ 30 ಜಿಲ್ಲೆಗಳ ಗೋಶಾಲೆಗಳಲ್ಲಿರುವ ಜಾನುವಾರುಗಳ ಹಾಗೂ ಗೋಶಾಲೆಗಳ ನಿರ್ವಹಣೆಗಾಗಿ ಬಿಡುಗಡೆ ಮಾಡಲಾದ ಅನುದಾನದ ವಿವರ.**

| ಕ್ರ. ಸಂ | ಜಿಲ್ಲೆಹೆಸರು | ಗೋಶಾಲೆಗಳಲ್ಲಿರುವ ಜಾನುವಾರುಗಳ ಹಾಗೂ ಗೋಶಾಲೆಗಳ ನಿರ್ವಹಣೆಗಾಗಿ ಬಿಡುಗಡೆ ಮಾಡಲಾದ ಅನುದಾನದ |
|---|---|---|
| 1 | ಬೆಳಗಾವಿ | ರೂ.50.00 ಲಕ್ಷ |
| 2 | ಬೀದರ | ರೂ.50.00 ಲಕ್ಷ |
| 3 | ಚಿತ್ತದುರ್ಗಾ | ರೂ.50.00 ಲಕ್ಷ |
| 4 | ದಕ್ಷಿಣಕನ್ನಡ | ರೂ.50.00 ಲಕ್ಷ |
| 5 | ದಾವಣಗೆರೆ | ರೂ.50.00 ಲಕ್ಷ |
| 6 | ಹಾಸನ | ರೂ.50.00 ಲಕ್ಷ |
| 7 | ಮಂಡ್ಯ | ರೂ.50.00 ಲಕ್ಷ |
| 8 | ತುಮಕೂರು | ರೂ.50.00 ಲಕ್ಷ |
| 9 | ಉತ್ತರಕನ್ನಡ | ರೂ.50.00 ಲಕ್ಷ |
| 10 | ಯಾದಗಿರಿ | ರೂ.50.00 ಲಕ್ಷ |
| 11 | ಬಳ್ಳಾರಿ | ರೂ.50.00 ಲಕ್ಷ |
| 12 | ಬಾಗಲಕೋಟೆ | ರೂ.50.00 ಲಕ್ಷ |
| 13 | ಚಿಕ್ಕಬಳ್ಳಾಪುರ | ರೂ.50.00 ಲಕ್ಷ |
| 14 | ರಾಮನಗರ | ರೂ.50.00 ಲಕ್ಷ |
| 15 | ಬೆಂಗಳೂರುಗ್ರಾಮಾಂತರ | ರೂ.50.00 ಲಕ್ಷ |
| 16 | ಚಿಕ್ಕಮಗಳೂರು | ರೂ.50.00 ಲಕ್ಷ |
| 17 | ಹಾವೇರಿ | ರೂ.50.00 ಲಕ್ಷ |
| 18 | ಕೊಡಗು | ರೂ.50.00 ಲಕ್ಷ |
| 19 | ಕೊಪ್ಪಳ | ರೂ.50.00 ಲಕ್ಷ |
| 20 | ರಾಯಚೂರು | ರೂ.50.00 ಲಕ್ಷ |
| 21 | ಉಡುಪಿ | ರೂ.50.00 ಲಕ್ಷ |
| 22 | ಧಾರವಾಡ | ರೂ.50.00 ಲಕ್ಷ |
| 23 | ಬಿಜಾಪುರ | ರೂ.50.00 ಲಕ್ಷ |
| 24 | ಶಿವಮೊಗ್ಗ | ರೂ.50.00 ಲಕ್ಷ |
| 25 | ಚಾಮರಾಜನಗರ | ರೂ.50.00 ಲಕ್ಷ |
| 26 | ಕಲಬುರಗಿ | ರೂ.50.00 ಲಕ್ಷ |
| 27 | ಮೈಸೂರು | ರೂ.50.00 ಲಕ್ಷ |
| 28 | ಕೋಲಾರ | ರೂ.50.00 ಲಕ್ಷ |
| 29 | ಬೆಂಗಳೂರುನಗರ | ರೂ.50.00 ಲಕ್ಷ |
| 30 | ಗದಗ | ರೂ.50.00 ಲಕ್ಷ |
| | **ಒಟ್ಟು** | **ರೂ.1500.00 ಲಕ್ಷ** |

## ಅನುಬಂಧ-3
## 2022-23ನೇ ಸಾಲಿನ ಸರ್ಕಾರಿ ಗೋಶಾಲೆಗಳಿಗೆ ಬಿಡುಗಡೆ ಮಾಡಲಾದ ಅನುದಾನ

| ಕ್ರ. ಸಂ | ಜಿಲ್ಲೆ | ಕ್ರ. ಸಂ | ಜಮೀನಿನವಿವರ | ಬಿಡುಗಡೆಮಾಡಿದ ಅನುದಾನ |
|---|---|---|---|---|
| 1 | ಬೆಳಗಾವಿ | 1 | ಕೆರೂರು ಗ್ರಾಮ, ಚಿಕ್ಕೋಡಿ ತಾಲ್ಲೂಕು .ಸ.ನಂ 76,9.36 ಎ. | ರೂ.50.00ಲಕ್ಷ |
| | | 2 | ಬೂದಿಹಾಳ ಗ್ರಾಮ, ರಾಯಭಾಗ ತಾಲ್ಲೂಕು. ಸ.ನಂ 38,9.30 ಎ. | ರೂ.50.00ಲಕ್ಷ |
| | | 3 | ಕೊಕಟನೂರ ಗ್ರಾಮ, ಅಥಣಿ ತಾಲ್ಲೂಕು. ಸ.ನಂ 408 ಅ,9.35ಎ | ರೂ.50.00ಲಕ್ಷ |
| 2 | ಬೀದರ್ | 4 | ಸೋಲ್ಪೂರ್ ಗ್ರಾಮ ಬೀದರ್ ತಾಲ್ಲೂಕು. sy.no.98. 16.01 .ಎ | ರೂ.50.00ಲಕ್ಷ |
| | | 5 | ಬಸವ ಕಲ್ಯಾಣ ತಾಲ್ಲೂಕಿನ ಚಂಡಕಾಪೂರ ಗ್ರಾಮ.sy.no.162/*/*/ | ರೂ.50.00ಲಕ್ಷ |
| 3 | ಚಿತ್ರದುರ್ಗ | 6 | ಚಿತ್ರುದುರ್ಗ ತಾಲ್ಲೂಕು, ಸಿಂಗಾಪುರ ಅಮೃತ್‌ಮಹಲ್‌ಕಾವಲು. sy.no.61. 10..ಎ | ರೂ.50.00ಲಕ್ಷ |
| 4 | ದಕ್ಷಿಣಕನ್ನಡ | 7 | ಮೂಡಬಿದ್ರೆ ತಾಲ್ಲೂಕು ಬೆಳುವಾಯಿ ಗ್ರಾಮ. sy.no.552.11.76.ಎ,553 .13.32 ಎ.ಒಟ್ಟು.24.08 | ರೂ.50.00ಲಕ್ಷ |
| | | 8 | ಸುಳ್ಯ ತಾಲ್ಲೂಕು ಉಬರಡ್ಕ ಮಿತ್ತೂರು ಕೊಡಿಯಾಲ ಗ್ರಾಮ. sy.no.196/1,33,334, 7.7..ಎ | ರೂ.50.00ಲಕ್ಷ |
| 5 | ದಾವಣಗೆರೆ | 9 | ಕ್ಯಾಸಿನಕೆರೆ ಗ್ರಾಮ, ಕ್ಯಾಸಿನಕೆರೆ ಗ್ರಾಮ ಪಂಚಾಯತಿ, ಸಾಸ್ವೇಹಳ್ಳಿ- ಹೋಬಳಿ, ಹೊನ್ನಾಳಿ ತಾಲ್ಲೂಕು, sy.no.858.9.36.ಎ | ರೂ.50.00ಲಕ್ಷ |
| | | 10 | ಗೌರಿಪುರ ಗ್ರಾಮ, ಸೊಕ್ಕೆ ಹೋಬಳಿ, ಜಗಳೂರು ತಾಲ್ಲೂಕು sy.no.9. 00 .ಎ | ರೂ.50.00ಲಕ್ಷ |
| 6 | ಹಾಸನ | 11 | ಚನ್ನರಾಯ ಪಟ್ಟಣ ತಾ.: ಅಮೃತ್‌ಮಹಲ್ ತಳಿಸಂವರ್ಧನ ಕಾವಲ್, ರಾಯಸಮುದ್ರ. sy.no.01. 25 .ಎ | ರೂ.50.00ಲಕ್ಷ |
| | | 12 | ಬೇಲೂರು ತಾ: ಪುಷ್ಪಗಿರಿ, ಹಳೇಬೀಡು ಹೋಬಳಿ, ಸಿದ್ದಾಪುರ ಗ್ರಾಮ, sy.no.76,.9.38.ಎ | ರೂ.50.00ಲಕ್ಷ |
| 7 | ಮಂಡ್ಯ | 13 | ನಾಗಮಂಗಲ ತಾ.ಕೆಲಗೆರೆ ಗ್ರಾಮ ಅಮೃತ್ ಮಹಲ್ ಕಾವಲು. sy.no.01.96.32 .ಎ | ರೂ.50.00ಲಕ್ಷ |
| | | 14 | ಮಳವಳ್ಳಿತಾ. ಬಿ.ಜಿ ಪುರ 2 ನೇ ಹೋಬಳಿ, ಹೆಬ್ಬಣಿ ಗ್ರಾಮ, ಸ.ನಂ 142 , 9.30 ಎಕರೆ. | ರೂ.50.00ಲಕ್ಷ |
| 8 | ತುಮಕೂರು | 15 | ತುರುವೇಕೆರೆ.ತಾ: ದುಂಡಾವರಮನೆ ಕಾವಲು, sy.no.40 .50.ಎ | ರೂ.50.00ಲಕ್ಷ |
| 9 | ಉತ್ತರಕನ್ನಡ (ಕಾರವಾರ) | 16 | ಸಾವಂತವಾಡಾ ಹೋಬಳಿ, ಕಣಸಗಿರಿ ಗ್ರಾಮ ಚಿತ್ತಾಕುಲಾ ಗ್ರಾಮ ಪಂಚಾಯತ್ ತಾ:, ಕಾರವಾರ. sy.no95 . .10.34.ಎ | ರೂ.50.00ಲಕ್ಷ |
| | | 17 | ಶಿರಶಿ ತಾಲ್ಲೂಕಿನ ಬಿಸ್ಲಕೊಪ್ಪ ಗ್ರಾಮ ಪಾವ್ಯೆ ಸಂಸ್ಥೆಯ ವ್ಯಾಪ್ತಿಯ ಅಜ್ಜಿಬಾಳ ಗ್ರಾಮದಲ್ಲಿ. sy.no.125. 08.ಎ | ರೂ.50.00ಲಕ್ಷ |
| 10 | ಯಾದಗಿರಿ | 18 | ಸುರಪೂರ ತಾಲ್ಲೂಕು ಗೋಡಿಹಾಳ (ಜೆ) sy.no.37 .10.ಎ. | ರೂ.50.00ಲಕ್ಷ |
| 11 | ಬಳ್ಳಾರಿ | 19 | ಕಂಪ್ಲಿ ತಾಲುಕು, ಕಂಪ್ಲಿ ಪಟ್ಟಣ. sy.no.1464/ಬಿ .5.ಎ | ರೂ.50.00ಲಕ್ಷ |
| 12 | ಬಾಗಲಕೋಟೆ | 20 | ರಬಕವಿ-ಬನಹಟ್ಟಿ ತಾ.ಗ್ರಾಮ, ಬಾಗಲಕೋಟೆ ತಾ: sy.no.130/1 .10.ಎ | ರೂ.50.00ಲಕ್ಷ |
| | | 21 | ಕೂಡಲಸಂಗಮ ಪ್ರಾದಿಕಾರ, ಹೊನಗುಂದ ತಾ:,20.ಎ | ರೂ.50.00ಲಕ್ಷ |
| 13 | ಚಿಕ್ಕಬಳ್ಳಾಪುರ | 22 | ಬಾಗೇಪಲ್ಲಿ ತಾಲ್ಲೂಕು ಕಸಬಾ ಹೋಬಳಿ, ಪರಗೋಡು ಗ್ರಾಮ. sy.no.307 .9.38.ಎ | ರೂ.50.00ಲಕ್ಷ |
| | | 23 | ಗುಡಿಬಂಡೆ ತಾ: ಕಸಬಾ ಹೋಬಳಿ, ವಾಬಸಂದ್ರ ಗ್ರಾಮ sy.no.77. 7.10 .ಎ | ರೂ.50.00ಲಕ್ಷ |
| 14 | ರಾಮನಗರ | 24 | ಮಾಗಡಿತಾ: ತಿಪ್ಪಸಂದ್ರ ಹೋಬಳಿ, ಕಾಮಸಾಗರ ಗ್ರಾಮ, sy.no.43. 05 .ಎ | ರೂ.50.00ಲಕ್ಷ |
| 15 | ಬೆಂಗಳೂರು ಗ್ರಾಮಾಂತರ | 25 | ಕಲ್ಲಹಳ್ಳಿ ಗ್ರಾಮ, ಕಸಬಾ ಹೋಬಳಿ, ಹೊಸಕೋಟೆ ತಾ: sy.no01. .08.ಎ | ರೂ.50.00ಲಕ್ಷ |

| | | | | |
|---|---|---|---|---|
| 16 | ಕೊಪ್ಪಳ | 26 | ಕನಕಗಿರಿ ತಾ, ಹುಲಿ ಹೈದರ ಹೋಬಳಿ, ಕನಕಾಪುರ ಗ್ರಾಮ .20 ಎಕರೆ | ರೂ.50.00ಲಕ್ಷ |
| 17 | ಬೆಂಗಳೂರು ನಗರ | 27 | ಹೆಸರಘಟ್ಟ ಹತ್ತಿರ ದೊಡ್ಡಬಳ್ಳಾಪುರ.ತಾ. ಮಧುರೆಹೋ .ಕೋಡಿಹಳ್ಳಿ ಗ್ರಾಮ, ಸ.ನಂ.97.23.02 | ರೂ.50.00ಲಕ್ಷ |
| 18 | ಚಿಕ್ಕಮಗಳೂರು | 28 | ಇಂದಾವರ ಗ್ರಾಮ, ಚಿಕ್ಕಮಗಳೂರು ತಾಲ್ಲೂಕು .sy.no.36.15.02 ಎ | ರೂ.50.00ಲಕ್ಷ |
| 19 | ಬಿಜಾಪುರ | 29 | ಸಿಂದಗಿ ತಾ. ಗಣಿಹಾರ ಗ್ರಾಮ .sy.no.39/1 , 08.32 ಎ. | ರೂ.50.00ಲಕ್ಷ |
| | | 30 | ಇಂಡಿ ತಾಲ್ಲೂಕು, ಬಬಲಾದ ಗ್ರಾಮ ಸ.ನಂ 355, 10.03 ಎಕರೆ | ರೂ.50.00ಲಕ್ಷ |
| 20 | ರಾಯಚೂರು | **31** | ಲಿಂಗಸೂರು ತಾಲ್ಲೂಕು, ಆಮದಿಹಾಳ್ ಸ.ನಂ 02/03, 10 ಎಕರೆ | ರೂ.50.00ಲಕ್ಷ |
| 21 | ಶಿವಮೊಗ್ಗ | **32** | ಮಳೂರು ಗ್ರಾಮ, ಶಿಕಾರಿಪುರ ತಾಲ್ಲೂಕು ಸ.ನಂ 20, 10.34 ಎಕರೆ | ರೂ.50.00ಲಕ್ಷ |
| | | **33** | ಮುಟುಗುಪ್ಪೆ ಗ್ರಾಮ ಸೊರಬ ತಾಲ್ಲೂಕು, ಸ.ನಂ110, 9.38 ಎಕರೆ | ರೂ.50.00ಲಕ್ಷ |
| 22 | ಚಾಮರಾಜನಗರ | **34** | ಹನೂರುತಾ:, ಅಜ್ಜಿಪುರ ಗ್ರಾಮ, ಸ.ನಂ956/1,959/1, 7.46 ಎಕರೆ | ರೂ.50.00ಲಕ್ಷ |
| 23 | ಕೋಲಾರ | **35** | ಕಾಡೇನಹಳ್ಳಿ ಗ್ರಾಮ, ಬೈರಕೂರು .ಹೋ.ಮುಳಬಾಗಿಲು .ತಾ. ಸ.ನಂ86, 15.18 ಎಕರೆ | ರೂ.50.00ಲಕ್ಷ |
| 24 | ಉಡುಪಿ | **36** | ಕಾಪು.ತಾ,ಯಲ್ಲೂರು ಗ್ರಾಮ. ಸ.ನಂ400/*/, 3.96 ಎಕರೆ | ರೂ.50.00ಲಕ್ಷ |
| 25 | ಧಾರವಾಡ | **37** | ಪರಸಾಪುರ ಗ್ರಾಮ, ಛಬ್ಬಿ ಹೋಬಳಿ, ಹುಬ್ಬಳ್ಳಿ. ಸ.ನಂ43,, 9.30 ಎಕರೆ | ರೂ.50.00ಲಕ್ಷ |
| | | | **ಒಟ್ಟು** | **ರೂ.1850 ಲಕ್ಷ** |